# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 853 |
| ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 23.02.2023 |
| ಉತ್ತರಿಸಬೇಕಾದ ಸಚಿವರು | : | ಮುಖ್ಯಮಂತ್ರಿಯವರು |

****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರ ಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ರಲ್ಲಿ 3 ಎಕರೆ 23 ಗುಂಟೆ ಜಮೀನನ್ನು ಬಿ.ಡಿ.ಎ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆಯೇ; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು) | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ರಲ್ಲಿನ 03 ಎಕರೆ 23 ಗುಂಟೆ ಜಮೀನನ್ನು ಪ್ರಾಧಿಕಾರದ ಬಿ.ಟಿ.ಎಂ. 4ನೇ ಹಂತದ ಬಡಾವಣೆ ರಚನೆಗಾಗಿ ಅಂತಿಮ ಅಧಿಸೂಚನೆ ಸಂಖ್ಯೆ: ಹೆಚ್‌ಯುಡಿ/334/ ಎಂಎನ್‌ಎಕ್ಸ್/1990 ಅನ್ನು ದಿನಾಂಕ:03.11.1990 ರಂದು ಹೊರಡಿಸಲಾಗಿದೆ.<br><br>ಸದರಿ ಜಮೀನಿಗೆ ಐತೀರ್ಪು ಅನುಮೋದನೆಯಾಗಿದ್ದು, ದಿನಾಂಕ: 03.11.1996 ರಂದು ತಾಂತ್ರಿಕ ವಿಭಾಗಕ್ಕೆ ಹಸ್ತಾಂತರಿಸಲಾಗಿರುತ್ತದೆ. ಭೂಸ್ವಾಧೀನ ಕಾಯ್ದೆ, 1894ರ ಸೆಕ್ಷನ್ 16(2) ರಡಿ ಹೊರಡಿಸಿರುವ ಅಧಿಸೂಚನೆಯನ್ನು ದಿನಾಂಕ: 08.02.2001 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಚುರಪಡಿಸಲಾಗಿದ್ದು, ಭೂಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡಿರುತ್ತದೆ. |
| ಆ | ಸದರಿ ಭೂ ಪ್ರದೇಶದಲ್ಲಿ ಬಿ.ಡಿ.ಎ. ಬಡಾವಣೆ ನಿರ್ಮಾಣ ಮಾಡಿ, ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ; (ಹಂಚಿಕೆ ಮಾಡಲಾಗಿರುವ ಪೂರ್ಣ ವಿವರಗಳನ್ನು ನೀಡುವುದು) | ಪ್ರಾಧಿಕಾರದಿಂದ ನಿರ್ಮಿಸಿರುವ ಬಿ.ಟಿ.ಎಂ. 4ನೇ ಹಂತದಲ್ಲಿ ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ರ ಜಾಗವು ಒಳಗೊಂಡಿದ್ದು, ಸದರಿ ಜಾಗದಲ್ಲಿ ನಿವೇಶನ ಸಂಖ್ಯೆಗಳಾದ: 1556 ರಿಂದ 1571, 1540 ರಿಂದ 1546, 1552 ರಿಂದ 1555, 1577 ರಿಂದ 1588, 1142/ಸಿ, 1153/ಸಿ, 1079/ಎ, 1071/ಬಿ, 1071/ಎ, 1528/ಎ ರಿಂದ 1528/ಎಫ್ ಒಟ್ಟು 50 ನಿವೇಶನಗಳು ಇರುತ್ತವೆ. ಹಂಚಿಕೆ ವಹಿಯಂತೆ ನಿವೇಶನ ಹಂಚಿಕೆ ವಿವರಗಳು ಕೆಳಕಂಡಂತಿದೆ. |

| ಕ್ರಮ ಸಂಖ್ಯೆ | ನಿವೇಶನ ಸಂಖ್ಯೆ | ಹಂಚಿಕೆ ವಹಿಯಂತೆ | ನೋಂದಣಿ ದಿನಾಂಕ |
|---|---|---|---|
| 1 | 1071/A | ಎಲ್. ದಾಸಪ್ಪ | 09/09/2014 |
| 2 | 1071/B | ಹಂಚಿಕೆ ಮಾಡಿ ರದ್ದುಪಡಿಸಲಾಗಿದೆ. | |
| 3 | 1571 | ಹಂಚಿಕೆ ಮಾಡಿ ರದ್ದುಪಡಿಸಲಾಗಿದೆ. | |
| 4 | 1528/A | ಹಂಚಿಕೆ ಮಾಡಿ ರದ್ದುಪಡಿಸಲಾಗಿದೆ. | |
| 5 | 1528/d | ಅರುಣ್ ಜಯರಾಮನ್ | 21/05/2009 |
| 6 | 1142/C | ಇಂದಿರಾ ಬಾಯಿ ಶಿಂಧೆ | 23/06/2017 |
| 7 | 1528/C | ಸಿ. ಗೋಪಾಲ್ | 10/07/2008 |

ಉಳಿದ ನಿವೇಶನಗಳು ಹಂಚಿಕೆ ವಹಿಯಂತೆ ಯಾರಿಗೂ ಹಂಚಿಕೆ ಮಾಡಿರುವುದಿಲ್ಲ.

| | | |
|---|---|---|
| ಇ | ಬಡಾವಣೆ ರಚನೆ ಮಾಡಿ, ನಿವೇಶನ ಸಂಖ್ಯೆಗಳನ್ನು ಗುರ್ತಿಸಿ ಸುಮಾರು 40 ವರ್ಷಗಳಾಗಿದ್ದರೂ, ನಿವೇಶನಗಳನ್ನು ಹಂಚಿಕೆ ಮಾಡದಿರಲು ಕಾರಣಗಳೇನು; | ಪ್ರಶ್ನಿತ ಜಮೀನಿನ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹಾಗೂ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಹಲವಾರು ದಾವೆಗಳು ಕಾಲಕಾಲಕ್ಕೆ ದಾಖಲಾಗಿರುವುದರಿಂದ, ನಿವೇಶನಗಳನ್ನು ಹಂಚಿಕೆ ಮಾಡಿರುವುದಿಲ್ಲ. ಕ್ರಮ ಸಂಖ್ಯೆ (ಋ) ರಲ್ಲಿ ಸರ್ವೆ ನಂಬರ್‌ಗಳನುಸಾರ ದಾವೆಗಳ ವಿವರಗಳನ್ನು ನೀಡಲಾಗಿದೆ. |
| ಈ | ಬಡಾವಣೆ ರಚನೆ ಮಾಡಿ, ನಿವೇಶನ ಹಂಚಿಕೆ ಮಾಡಿದ ಸುಮಾರು 40 ವರ್ಷಗಳ ನಂತರ ಬಿ.ಡಿ.ಎ. ಅಧಿಕಾರಿಗಳು, ಸದರಿ ಸ್ವತ್ತನ್ನು ಅಕ್ರಮವಾಗಿ ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ಭೂಸ್ವಾಧೀನಗೊಂಡಿದ್ದು, ಪ್ರಾಧಿಕಾರದ ಸ್ವತ್ತಾಗಿರುತ್ತದೆ. |
| ಉ | ಸದರಿ ಸರ್ಕಾರಿ ಸ್ವತ್ತನ್ನು ಖಾಸಗಿ ವ್ಯಕ್ತಿ, ಬೇರೆಯವರಿಗೆ ಮರು ಮಾರಾಟ ಮಾಡಿರುವುದು ಹಾಗೂ ಒಡಂಬಡಿಕೆ ಮಾಡಿಕೊಂಡಿರುವುದಲ್ಲದೆ, ಸದರಿ ಜಾಗಕ್ಕೆ ಫಲಾನುಭವಿಗಳು ಹೋದಲ್ಲಿ, ಸದರಿ ಖಾಸಗಿ ವ್ಯಕ್ತಿಯು ಗೂಂಡಾಗಿರಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2 ರ ಜಾಗವು ಪ್ರಾಧಿಕಾರದ ಸ್ವತ್ತಾಗಿರುವುದರಿಂದ, ಖಾಸಗಿ ವ್ಯಕ್ತಿಗಳು ದೌರ್ಜನ್ಯ ಮಾಡಿದಲ್ಲಿ ಪ್ರಾಧಿಕಾರದ ವಿಶೇಷ ಜಾಗೃತ ದಳದಿಂದ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು. |
| ಊ | ಸರ್ಕಾರಿ ಆಸ್ತಿಯನ್ನು ಅಕ್ರಮವಾಗಿ ಖಾಸಗಿಯವರಿಗೆ ಮಾಡಿಕೊಟ್ಟು, ಸರ್ಕಾರದ ಬೊಕ್ಕಸಕ್ಕೆ ಕೋಟ್ಯಾಂತರ ರೂಪಾಯಿಗಳ ನಷ್ಟ ಉಂಟು ಮಾಡಿರುವ ತಪ್ಪಿತಸ್ಥ ಬಿ.ಡಿ.ಎ. ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2ರ ಜಾಗವು ಪ್ರಾಧಿಕಾರದ ಸ್ವತ್ತಾಗಿದ್ದು, ಪ್ರಾಧಿಕಾರದಿಂದ ಅಕ್ರಮವಾಗಿ ಖಾಸಗಿಯವರಿಗೆ ನೀಡಲಾಗಿಲ್ಲ. |
| ಋ | ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/1, 27/2, 27/3, 29/1, 29/2, 29/3, 30, 33 ಹಾಗೂ 35ರ ಸ್ವತ್ತುಗಳು ಯಾರ ಸ್ವಾಧೀನದಲ್ಲಿವೆ? (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು). | ಈ ಸರ್ವೆ ನಂಬರ್‌ಗಳು ಪ್ರಾಧಿಕಾರದ ವತಿಯಿಂದ ಭೂಸ್ವಾಧೀನಗೊಂಡ ಅಧಿಸೂಚಿತ ಪ್ರದೇಶಗಳಾಗಿದ್ದು, ಹಲವಾರು ಸುತ್ತಿನಲ್ಲಿ ನ್ಯಾಯಾಲಯಗಳಲ್ಲಿ ರಿಟ್ ಅರ್ಜಿ / ಮೂಲ ದಾವೆ / ಮೇಲ್ಮನವಿಗಳು ದಾಖಲಾಗಿದ್ದು, ಸರ್ವೆ ನಂಬರ್‌ವಾರು ವಿವರಗಳು ಈ ಕೆಳಕಂಡಂತಿರುತ್ತದೆ.<br>1) **<u>ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/1</u>:-** 02 ಎಕರೆ 01 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/1 ರಲ್ಲಿ 2 ಎಕರೆ 01 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂ.41771-792/2002 ದಿನಾಂಕ:10.04.2003 ರಂದು ವಜಾಗೊಂಡಿದೆ. ಇದೇ ಸರ್ವೆ ನಂಬರ್ ಗೆ ಸಂಬಂಧಿಸಿದಂತೆ ದಾಖಲಿಸಲ್ಪಟ್ಟಿದ್ದ ಮೂಲದಾವೆ ಸಂಖ್ಯೆ: 1719/1999 ದಿನಾಂಕ: 23.08.2018 ರಂದು ವಜಾಗೊಂಡಿದೆ. ತದನಂತರ ರಿಟ್ ಅರ್ಜಿ ಸಂಖ್ಯೆ:6360/ 2020ರ ಸಂಬಂಧ ಪ್ರಾಧಿಕಾರದ ವತಿಯಿಂದ ರಿಟ್ ಅಪೀಲು ಸಂ.882/2021 ದಾಖಲಾಗಿರುತ್ತದೆ.<br>2) **<u>ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/2</u>:-** 3ಎಕರೆ 23 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿದೆ. ದೇವರಚಿಕ್ಕನಹಳ್ಳಿ ಗ್ರಾಮದ ಸ.ನಂ.27/2ಕ್ಕೆ ಸಂಬಂಧಿಸಿದಂತೆ ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯಗಳಲ್ಲಿ ಪ್ರಾಧಿಕಾರದ ವಿರುದ್ಧ ದಾಖಲಾಗಿದ್ದ ಮೂಲದಾವೆ ಸಂಖ್ಯೆ: 1824/1993 ದಿನಾಂಕ: 28.11.2000 ರಲ್ಲಿ ವಜಾಗೊಂಡಿದೆ. ಶ್ರೀಮತಿ ಶಾಂತಮ್ಮ ಮತ್ತು ಇತರರು ಭೂಸ್ವಾಧೀನದ ಕ್ರಮವನ್ನು ಪ್ರಶ್ನಿಸಿ, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಪಿಟಿಷನ್ ಸಂಖ್ಯೆ: 41386-395/2017 ರಲ್ಲಿ ದಿನಾಂಕ:24.10.2019 ರಂದು ಅಂತಿಮ ಆದೇಶವಾಗಿರುತ್ತದೆ. ಅರ್ಜಿದಾರರು ದಿನಾಂಕ: 14.01.2020 ರಂದು ಹಿಂಬರಹವನ್ನು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರ ಮನವಿಯನ್ನು ಪರಿಶೀಲಿಸಿ ಸರ್ವೆ ನಂಬರಿನ ವಾಸ್ತವಾಂಶ ಮಾಹಿತಿಯನ್ನು ಅರ್ಜಿದಾರರಿಗೆ ನಿಯಮಾನುಸಾರ ಹಿಂಬರಹ ನೀಡಲಾಗಿದ್ದು, ಸದರಿ ಹಿಂಬರಹವು ನಿರಾಕ್ಷೇಪಣಾ ಪತ್ರವಾಗಿರುವುದಿಲ್ಲ. ಆದಾಗ್ಯೂ, ಸದರಿ ಹಿಂಬರಹವು ದುರುಪಯೋಗವಾಗುತ್ತಿರುವುದು ಚರ್ಚೆಯಲ್ಲಿ ರುವುದರಿಂದ ಮಾನ್ಯ ನ್ಯಾಯಾಲಯದ ಆದೇಶವನ್ನು ಮತ್ತೊಮ್ಮೆ ಕಾನೂನಾತ್ಮಕವಾಗಿ ಪರಿಶೀಲಿಸಿ, ರಿಟ್ ಪಿಟಿಷನ್ ಸಂಖ್ಯೆ:41386-395/2017 ರ ಆದೇಶದ ವಿರುದ್ಧ ಮಾನ್ಯ ವಿಭಾಗೀಯ ಪೀಠಕ್ಕೆ ರಿಟ್ ಮೇಲ್ಮನವಿ ಸಂಖ್ಯೆ:398/2021 ಅನ್ನು ದಾಖಲಿಸಲಾಗಿದೆ. |

3) **ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/3:-** 1 ಎಕರೆ 17 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ನಿವೇಶನಗಳನ್ನು ವಿಂಗಡಿಸಿದ್ದು, ಪ್ರಾಧಿಕಾರದ ವಶದಲ್ಲಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.27/3 ರಲ್ಲಿ 1 ಎಕರೆ 17 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂ.41771-792/2002 ದಿನಾಂಕ:10.04.2003 ರಂದು ವಜಾಗೊಂಡಿದೆ. ರಿಟ್ ಅರ್ಜಿ ಸಂಖ್ಯೆ.19904/2016 ದಾಖಲಾಗಿದ್ದು, ಪ್ರಸ್ತುತ ವಿಚಾರಣೆಗೆ ಬಾಕಿ ಇರುತ್ತದೆ.

4) **ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.29/1:-** 06 ಎಕರೆ 12 ಗುಂಟೆ ಜಮೀನಿನ ಪೈಕಿ 02 ಎಕರೆ 20 ಗುಂಟೆ ಜಮೀನು ಗ್ರಾಮ ಠಾಣಾ ಆಗಿದ್ದರಿಂದ ಭೂಸ್ವಾಧೀನ ಶಾಖೆಯಿಂದ ಅವಾರ್ಡ್ ಆಗಿರುವುದಿಲ್ಲ. ಈ ಪ್ರದೇಶದಲ್ಲಿ ಹಳೆಯ ಕಟ್ಟಡಗಳು (ರೆವಿನ್ಯೂ ಪಾಕೆಟ್) ಇರುತ್ತದೆ. ಉಳಿಕೆ 03 ಎಕರೆ 32 ಗುಂಟೆ ಜಾಗದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:64621-25/2016 ರಲ್ಲಿ ನೀಡಲಾದ ದಿನಾಂಕ: 24.09.2019ರ ಆದೇಶದಲ್ಲಿ ಭೂಸ್ವಾಧೀನ ಪ್ರಕ್ರಿಯೆಯು Lapsed ಆಗಿದೆ ಎಂದು ತಿಳಿಸಲಾಗಿರುತ್ತದೆ. ಇದರ ವಿರುದ್ಧ ಪ್ರಾಧಿಕಾರದ ವತಿಯಿಂದ ರಿಟ್ ಅಪೀಲು ದಾಖಲಿಸಲು ಕ್ರಮವಹಿಸಲಾಗಿದೆ. ಮುಂದುವರೆದು, ಸರ್ವೆ ನಂ.29/1 ರಲ್ಲಿ ಕಂದಾಯ ಇಲಾಖೆಯಿಂದ 29/4, 29/5 ಮತ್ತು 29/6 ಎಂದು ದಾಖಲೆಗಳನ್ನು ಮಾಡಿಕೊಂಡು ಅನಧಿಕೃತ ಬಡಾವಣೆ ಮಾಡಲು ಪ್ರಯತ್ನಿಸಿದ್ದು, ತತ್ಸಂಬಂಧ ದಾವೆಗಳು ಇಲ್ಲದಿರುವುದನ್ನು ಖಾತ್ರಿಪಡಿಸಿಕೊಂಡು ತೆರವುಗೊಳಿಸಲು ಪ್ರಾಧಿಕಾರದಿಂದ ಕ್ರಮಕೈಗೊಳ್ಳಲಾಗುವುದು.

5) **ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.29/2:-** 01 ಎಕರೆ 05 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.29/2 ರಲ್ಲಿ 01 ಎಕರೆ 05 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ: 6360/2020 ರ ಸಂಬಂಧ ಪ್ರಾಧಿಕಾರ ವತಿಯಿಂದ ರಿಟ್ ಅಪೀಲು ಸಂ.882/2021 ದಾಖಲಿಸಲಾಗಿದ್ದು, ಪ್ರಸ್ತುತ ವಿಚಾರಣೆಗೆ ಬಾಕಿ ಇರುತ್ತದೆ.

6) **ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.29/3:-** 01 ಎಕರೆ 01 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.29/3. ರಲ್ಲಿ 01 ಎಕರೆ 01 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂಖ್ಯೆ:6360/2020ರ ಸಂಬಂಧ ಪ್ರಾಧಿಕಾರದ ವತಿಯಿಂದ ರಿಟ್ ಅಪೀಲು ಸಂ.882/2021 ದಾಖಲಿಸಲಾಗಿದ್ದು, ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

7) **ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.30:-** 03 ಎಕರೆ 10 ಗುಂಟೆ ಪ್ರದೇಶದ ಜಮೀನಿನಲ್ಲಿ ಪ್ರಾಧಿಕಾರದಿಂದ ಭಾಗಶಃ ಬಡಾವಣೆ ನಿರ್ಮಿಸಿದ್ದು, ಉಳಿದ ಭಾಗಶಃ ಭಾಗದಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿಕೊಂಡು ಶೆಡ್ ಮತ್ತು ಆರ್.ಸಿ.ಸಿ. ಕಟ್ಟಡಗಳನ್ನು ನಿರ್ಮಿಸಿಕೊಂಡು ಸಂಪೂರ್ಣವಾಗಿ Built up ಆಗಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.30 ರಲ್ಲಿ 03 ಎಕರೆ 10 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂ.64621-625/2016 ರಲ್ಲಿ ದಿನಾಂಕ:24.09.2019 ರಂದು ಪ್ರಾಧಿಕಾರದ ವಿರುದ್ಧ ಆದೇಶವಾಗಿರುವುದರಿಂದ ಸದರಿ ಆದೇಶದ ವಿರುದ್ಧ ಪ್ರಾಧಿಕಾರದ ವತಿಯಿಂದ ರಿಟ್ ಅಪೀಲು ದಾಖಲಿಸಲು ಕ್ರಮ ವಹಿಸಲಾಗಿದೆ.

8) **ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.33:-** 02 ಎಕರೆ 27 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ಸದರಿ ಜಮೀನಿನ ಸರ್ವೆ ನಂ.33/2ಎ ಮತ್ತು 33/2ಬಿ ಗಳ ಮೇಲೆ ರಿಟ್ ಅರ್ಜಿ ಸಂಖ್ಯೆ:23251-255/2016 ರಲ್ಲಿ ನೀಡಲಾದ ದಿನಾಂಕ:09.08.2017ರ ಆದೇಶವು ಪ್ರಾಧಿಕಾರದ ವಿರುದ್ಧವಾಗಿದೆ. ಈ ಆದೇಶದ ವಿರುದ್ಧ ಪ್ರಾಧಿಕಾರದ

| | | |
|---|---|---|
| | | ವತಿಯಿಂದ ದಾಖಲಿಸಿದ್ದ ರಿಟ್ ಅಪೀಲು ಸಂಖ್ಯೆ: 1561/2018 ದಿನಾಂಕ: 01.02.2018 ರಂದು ವಜಾಗೊಂಡಿದೆ. ಈ ಅಪೀಲು ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ದಾಖಲಿಸಲು ಕ್ರಮವಹಿಸಲಾಗಿ ವಕೀಲರ ಸಲಹೆಯಂತೆ ಪ್ರಸ್ತುತ Restoration Application ದಾಖಲಿಸಲು ಕ್ರಮವಹಿಸಿದೆ. ಸರ್ವೆ ನಂ.33/1 ಜಮೀನಿನಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.33/1 ರಲ್ಲಿ 01 ಎಕರೆ 17 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದಾಖಲಾಗಿದ್ದ ರಿಟ್ ಅರ್ಜಿ ಸಂ.4560/2021 ದಿನಾಂಕ: 01.09.2021 ರಂದು ವಜಾಗೊಂಡಿದೆ.<br>9) <u>ದೇವರಚಿಕ್ಕನಹಳ್ಳಿ ಗ್ರಾಮದ ಸರ್ವೆ ನಂ.35</u>:- ಸರ್ವೆ ನಂ.35/1 ರಲ್ಲಿ 01 ಎಕರೆ 00 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ಸರ್ವೆ ನಂ.35/2 ರಲ್ಲಿ 00-39 ಗುಂಟೆ ಪ್ರದೇಶದಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಲಾಗಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ: 12288/2018 ರಲ್ಲಿ ನೀಡಲಾದ ದಿನಾಂಕ:03.03.2020ರ ಆದೇಶದ ವಿರುದ್ಧ ಪ್ರಾಧಿಕಾರದ ವತಿಯಿಂದ ದಾಖಲಿಸಲಾಗಿದ್ದ ರಿಟ್ ಅಪೀಲು ಸಂಖ್ಯೆ:740/2021 ದಿನಾಂಕ:10.11.2021 ರಂದು ವಜಾಗೊಂಡಿದೆ. ಸದರಿ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ಸಂಖ್ಯೆ: 1349/2022 ಅನ್ನು ದಾಖಲಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ Status quo ಆದೇಶವಾಗಿ, ವಿಚಾರಣೆ ಬಾಕಿ ಇರುತ್ತದೆ. |

**ಸಂಖ್ಯೆ: ನಅಇ 49 ಬೆಂಭೂಸ್ವಾ 2023**

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ